# ರಾಷ್ಟ್ರೀಯ ಸೇವಾ ಯೋಜನೆಯ ಗೀತೆ

ರಾಷ್ಟ್ರೀಯ ಸೇವಾ ಯೋಜನೆ ಮಾಡಿಹರು ಸೇವೆಯ ಮಾಡೋಣ ಬನ್ನಿ
ನಾವು ಸೇವೆಯ ಮಾಡೋಣ ಬನ್ನಿ, ನಾವು ಸೇವೆಯ ಮಾಡೋಣ ಬನ್ನಿ, //2//

ಕೈ ಕೆಸರಾಗಲಿ ನೆಲ ಹುಲುಸಾಗಲಿ
ಸೇವೆಯ ಮಾಡೋಣ ಬನ್ನಿ, ಸೇವೆಯ ಮಾಡೋಣ ಬನ್ನಿ, //ರಾ//

ಗ್ರಾಮಗಳ ಉದ್ಧಾರ ನಮ್ಮ ಉದ್ದೇಶ
ಗ್ರಾಮಗಳ ಬೆಳೆಯೇ ಬೆಳೆಯುವುದು ದೇಶ
ಭ್ರಾತೃತ್ವ ಬೆಳೆಸಿ ಎಲ್ಲರಲ್ಲಿ ನಾವು ಸೇವೆಯ ಮಾಡೋಣ ಬನ್ನಿ, //ರಾ//

ಒಬ್ಬರಿಗೊಬ್ಬರು ಕಲಿಸುವ ಧೋರಣೆ
ಒಬ್ಬೊಬ್ಬರೊಂದೊಂದು ಗಿಡ ಬೆಳೆಸುವ ಪ್ರೇರಣೆ
ಮಿತಸಂತತಿ ಹಿತನುಡಿಯ ನುಡಿಯೋಣ ಬನ್ನಿ, ಸೇವೆಯ ಮಾಡೋಣ ಬನ್ನಿ, //ರಾ//

ಪರಿಸರ ಅಭಿವೃದ್ಧಿ ಮಾಡುತ್ತ ಸಾಗೋಣ
ಜೈವಿಕ ಅನಿಲಯಂತ್ರ ಪ್ರಚಾರಗೊಳಿಸೋಣ
ಹೊಗೆರಹಿತ ಒಲೆಗಳನ್ನು ನಿರ್ಮಾಣ ಮಾಡಿ, ಸೇವೆಯ ಮಾಡೋಣ ಬನ್ನಿ, //ರಾ//

ಜಾತಿ ಮತ ಪಂಥಗಳ ಬೇಧವ ಮರೆತು
ಸದ್ಭಾವದಿಂದ ಎಲ್ಲರಲ್ಲೂ ಬೆರೆತು
ದ್ವೇಷ ಅಸೂಯೆ ಮನದಿಂದ ಕಳೆದು ಸೇವೆಯ ಮಾಡೋಣ ಬನ್ನಿ, //ರಾ//

ಸಹಕಾರ ಸೌಹಾರ್ದ ಬೆಳೆಸೋಣ ಬನ್ನಿ
ರಾಷ್ಟ್ರೀಯ ಭಾವೈಕ್ಯ ಉಳಿಸೋಣ ಬನ್ನಿ
ಯುವ ಶಕ್ತಿ ಜಯತೆ ಪಠಿಸೋಣ ಬನ್ನಿ
ಸೇವೆಯ ಮಾಡೋಣ ಬನ್ನಿ, //ರಾ//

ಸೇವೆಯ ಮಾಡುತ್ತಾ ಕಲಿಯೋಣ ಬನ್ನಿ
ಸೇವೆಯ ಸವಿಜೇನು ಸವಿಯೋಣ ಬನ್ನಿ
ಸೇವೆಯ ಸವಿಜೇನು ಹಂಚೋಣ ಬನ್ನಿ
ಶ್ರಮಯೇವ ಜಯತೇ, ಶ್ರಮಯೇವ ಜಯತೇ, ಶ್ರಮಯೇವ ಜಯತೇ
ಶ್ರಮಯೇವ ಜಯತೇಃ//ರಾ//

— ಡಾ. ಎಂ. ಬಿ. ದಿಲ್‌ಷಾದ್